**ಸಾಕ್ಷಿಯನ್ನು ದಿಃ09.06.2023 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ-ಸವಾಲುಃ ಪ್ರತಿವಾದಿಗಳ ಪರ ಶ್ರೀ.ಎಸ್.ಜೆ. ವಕೀಲರಿಂದಃ**

ನಾನು ಹಾಜರುಮಾಡಿದ ನಿಪಿ-16 ರಂತೆ ಸರ್ವೆ ನಂಃ161 ರಲ್ಲಿ ಒಟ್ಟು 36 ಎಕರೆ 26 ಗುಂಟೆ ಜಮೀನು 4 ಜನಕ್ಕೆ ವಿಭಾಗದಲ್ಲಿ ಬಂದಿದೆ ಎಂದರೆ ನಿಜ. ಆ ನಾಲ್ಕು ಜನರು ತಮ್ಮ ತಮ್ಮ ಮಧ್ಯ ನಿಪಿ-16 ರಲ್ಲಿ ಬಂದ ಜಮೀನು ಹಂಚಿಕೊಂಡ ನಂತರವೇ ನನಗೆ ಖರೀದಿಯಾಗಿದೆ. ಸದರಿ ವಿಭಾಗ ಪತ್ರ ನನ್ನ ಬಳಿ ಇದೆ ಆ ದಾಖಲೆ ನ್ಯಾಯಾಲಯದಲ್ಲಿ ಹಾಜರು ಮಾಡಿದ್ದೇನೆ. 36 ಎಕರೆ 26 ಗುಂಟೆ ಜಮೀನಿನ ಪೂರ್ವಕ್ಕೆ ಆಂಧ್ರಪ್ರದೇಶದ ಗಡಿ ಇದೆ ಎಂದರೆ ನಿಜ. ಪಶ್ಚಿಮಕ್ಕೆ ಸರ್ವೆ ನಂಃ164 ಜಮೀನು, ಉತ್ತರಕ್ಕೆ 2 ನೇ ಹಿಸ್ಸೆದಾರರ ಭಾಗ ಮತ್ತು ದಕ್ಷಿಣಕ್ಕೆ ಸರ್ವೆ ನಂಃ162 ಇದೆ ಎಂದರೆ ನಿಜ.

ನಾನು ಕ್ರಯಪತ್ರದ ಅಡಿ ಕೊಂಡುಕೊಂಡಿರುವ ಜಮೀನಿನ ಪೂರ್ವಕ್ಕೆ ಅಮರಾಪುರದ ದಾರಿ ಎಂದು ನಮೂದಾಗಿದೆ ಎನ್ನುವುದು ನಿಜ. ಪಶ್ಚಿಮಕ್ಕೆ ರಿ.ಸರ್ವೆ ನಂಃ164 ಎಂದು ನಮೂದಾಗಿದೆ ಎನ್ನುವುದು ನಿಜ. ಉತ್ತರಕ್ಕೆ ಸರ್ವೆ ನಂಃ159 ಎಂದು ನಮೂದಾಗಿದೆ ಎನ್ನುವುದು ನಿಜ. ದಕ್ಷಿಣಕ್ಕೆ ಸರ್ವೆ ನಂಃ162 ಇದೆ ಎಂದರೆ ನಿಜ. ನಿಪಿ-16 ರಲ್ಲಿ ಒಟ್ಟು 36 ಎಕರೆ 26 ಗುಂಟೆ ಜಮೀನಿಗೆ ನಮೂದಿಸಿರುವ ಚೆಕ್ಕುಬಂದಿಯೇ ನನ್ನ ಕ್ರಯಪತ್ರದಲ್ಲಿರುವ ಜಮೀನಿಗೆ ನಮೂದಿಸಿದ್ದಾರೆ ಎನ್ನುವುದು ನಿಜ. ಈ ದಾವೆಯ ಜಮೀನಿನ ಪೂರ್ವಕ್ಕೆ ಆಂಧ್ರಪ್ರದೇಶದ ಗಡಿ ಎಂದು ತೋರಿಸಿದ್ದೇನೆ.

ದಾವಾ ಷೆಡ್ಯೂಲ್‌ನಲ್ಲಿ ಜಮೀನಿನ ಪಶ್ಚಿಮಕ್ಕೆ ಇದೇ ಸರ್ವೆನಂಬರ್ ನ ಬೇರೆ ಹಿಸ್ಸೆದಾರರ ಜಮೀನು ಎಂದು ತೋರಿಸಿದ್ದು ನಿಜ. ಉತ್ತರಕ್ಕೆ ಗೋವಿಂದಪ್ಪನ ಜಮೀನು ಮತ್ತು ದಕ್ಷಿಣಕ್ಕೆ ಇದೇ ಸರ್ವೆ ನಂಬರ್ ನ ಬೇರೆ ಭಾಗದಾರರಾದ ಚನ್ನಪ್ಪನ ಜಮೀನು ಎಂದು ತೋರಿಸಿದ್ದು ನಿಜ. ಸರ್ವೆ

ನಂಃ161 ಮತ್ತು ದಾವೆಯ ಜಮೀನಿನ ಚೆಕ್ಕುಬಂದಿಗಳ ದಾಖಲಾತಿಗಳನ್ನು ಹಾಜರುಮಾಡಿದ್ದೇನೆ. ನಾನು ದಾವಾ ಷೆಡ್ಯೂಲ್‌ನಲ್ಲಿ ಹೇಳಿರುವ ಆಸ್ತಿಯ ಚೆಕ್ಕುಬಂದಿ ತೋರಿಸುವ ದಾಖಲೆ ಇರುತ್ತದೆ. ನಿಪಿ-17 ಈ ಪ್ರಕರಣಕ್ಕೋಸ್ಕರ ಸೃಷ್ಠಿ ಮಾಡಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ ಹಿರಿಯೂರು.